ನಂ. 3358.—ಯಕ್ಸೈ. 123, ಸ|| 1895ನೇ ಡಿಸೆಂಬರ್ 11ನೇ ಮಕ್ತುಂ 5512—ಯಕ್ಸೈ. 183ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿಯಾದ ಮೇರೆ 1893ನೇ ಜನವರಿ 14ನೇ ಮಕ್ತುಂ 11813—ರೆ. ಫೈ. 233ನೇ ನಂಬರ್ ಇಸ್ತಿಹಾರ್ ನಾಮೆ ಅನುಸರಿಸಿ, ಫಾಯಿಷ್ ಮಾಡಲ್ಪಟ್ಟ ರೂಲ್ಸಿನ Vನೇ ರೂಲ್ 6ನೇ ಕ್ಲಾಸಿನ (3)ನೇ ಸಬ್ ಕ್ಲಾಜಿಗೆ ಈ ಕೆಳಗೆ ಕಂಡದ್ದನ್ನ ಬದಲಾಗಿ ಸೇರಿಸಲ್ಪಡತಕ್ಕದ್ದೆಂದು ಗವರ್ಣಮೆಂಟಿನವರು ಆಜ್ಞಾಪಿಸುತ್ತಾರೆ:—

"(3) ಲೈಸೆನ್ಸುದಾರನಿಂದ ಹಾಜರ್ಮಾಡಲ್ಪಟ್ಟ ಶೇವಣಿ ಮೊಬಲಗು, ಗುತ್ತಿಗೆ ವಾಯಿದೆಯ ಆಖೈರ್ ತಿಂಗಳು ಯಾ ತಿಂಗಳು "ಗಳಲ್ಲಿ ಪಾವತಿಯಾಗಬೇಕಾದ ಖಿಸ್ತುಗಳ ಬಾಕಿಗಾಗಿ, ತೆಗೆದುಕೊಳ್ಳಲ್ಪಡತಕ್ಕದ್ದು. ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜಿನ ನಿ "ಯಮಗಳನುಸರಿಸಿ, ಇಜಾರೆಯು ದುಸರಾ ಹರಾಜ್ ಯಾ ರದ್ದುಮಾಡಲ್ಪಟ್ಟಾಗ, ಡಿಪಾಜಿಟ್ ಮೊಬಲಗು ಡೆಪ್ಯೂಟಿ ಕಮ್ಮಿಷನರವರ "ಯುಕ್ತಾನುಸಾರ ದಂಡವಾಗಿ ತೆಗೆದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕಿಗೂ ಮತ್ತು "ಇಜಾರೆಯು ಪುನಶ್ಚ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಉಪಯೋಗಿಸಲ್ಪ "ಡಬಹುದು. ಹಾಗೆ ಬರಬೇಕಾದ ಬಾಕಿ ವ ನಷ್ಟದ ಮೊಬಲಗು ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಯಾಗಿ ಜಾರಿಯಲ್ಲಿರುವ "ರೂಲ್ಸ ಅನುಸರಿಸಿ, ಲೈಸೆನ್ಸುದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸುದಾರನಿಂದ ಯಾವ ಸಬಬಿನ ಮೇಲಾಗಲಿ ಗುತ್ತಿಗೆ ಮೊ "ಬಲಗಿನ ಯಾವ ರಿಮಿಷನ್ ಅಥವಾ ಕಮ್ಮಿ ಮಾಡುವಣವಾಗಲಿ ಯಾ ಈಜು ಮೊಬಲಗಾಗಲಿ ಕೇಳಲ್ಪಡಕೂಡದು."

"(3 A.) ಬಾಕಿ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ "ಮೊಬಲಗಿಗೆ ಪುನಶ್ಚ ಹರಾಜಾದ ತಾರೀಖಿನ ಲಾಗಾಯತು ಸಾಲಿಯಾನಾ ಶೇಕಡಾ 6ರ ಪ್ರಕಾರ ಆಗವ ಬಡ್ಡೀ ದೇಖೀಲ್ ವಸೂಲ್ಮಾ "ಡಲ್ಪಡತಕ್ಕದ್ದು."

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ಣಮೆಂಟ್ ಸೆಕ್ರೆಟೆರಿ.

ಮುಜರಾಯಿ ಇಲಾಖೆ.

ನೋಟಿಫಿಕೇಷ್ಣ.

ನಂ. 486. ತಾರೀಖು 28—9—1896, ಬೆಂಗಳೂರು.

ಜೇಲೂರು ಕಸಬಾದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಛತ್ರಕ್ಕೂ ಮತ್ತು ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನ, ಅಮೃತೇಶ್ವರದೇವಸ್ಥಾನ, ಪಂಚಲಿಂಗನೇಯದೇವಸ್ಥಾನ ಈ ಮೂರು ದೇವಸ್ಥಾನಗಳಿಗೂ ಸಹ ಈ ಕೆಳಗೆ ನಮೂದಿಸುವವರನ್ನ ಯ ರಡು ವರುಷಗಳ ಪರ್ಯಂತರ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

(1) ಕಾಫಿ ಪ್ಲಾಂಟರ್ ಕಳಸಾಪುರದ ತಮ್ಮಯ್ಯನವರು.
(2) ಡಿಟೋ ಕೇಶವದಾಸಯ್ಯಂಗಾರು).
(3) ಡಿಟೋ ಪರ್ಷ ರಿಕಾರ್ಡಿಂಗ್ ಕೀಪರ್ ರಾಮರಾಯರು.
(4) ಲಕ್ಕುಂದದ ಶಾನುಭೋಗ ಕೇಶವಯ್ಯಂಗಾರು).
(5) ಸಾಹುಕಾರ್ ಮತ್ತು ಕಾಫಿ ಪ್ಲಾಂಟರ್ ವೆಂಗಯ್ಯಶೆಟ್ಟರು.

ನಂ. 500. ತಾರೀಖು 30ನೇ ಸೆಪ್ಟಂಬರ್ 1896ನೇ ಇಸವಿ, ಬೆಂಗಳೂರು.

ಮಾಲೂರು ತಾಲ್ಲೂಕು ಚಿಕ್ಕ ತಿರುಪತಿಯಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಶ್ರೀ ವೆಂಕಟರಮಣ ಸ್ವಾಮಿಯವರ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

(1) ಕಲ್ಲುಕೆರೆಯಲ್ಲಿರುವ ಶಾನುಭಾಗ ಶೇತಾರಾಮಯ್ಯನವರು.
(2) ಜಗಪೇನಹಳ್ಳಿಯಲ್ಲಿರುವ ಶಾನುಭಾಗ ನಾರಣಪ್ಪನವರು.
(3) ಚಿಕ್ಕ ತಿರುಪತಿಯಲ್ಲಿರುವ ವೆಂಕಟರಮಣಗವುಡರು.
(4) ಸಂಪಂಗೆರೆಯಲ್ಲಿರುವ ಪಟೇಲ್ ತಿಮ್ಮರಾಯಗವುಡರು.

ಏ. ಶ್ರೀನಿವಾಸಾಚಾರ್ರು,
ಮುಜರಾಯಿ ಸೂಪರ್‌ಟೆಂಡೆಂಟ್ ಮತ್ತು ಸೆಕ್ರೆಟೆರಿ.

ಜಿಯೊಲಾಜಿಕಲ್.

ತಾರೀಖು 30ನೇ ಸೆಪ್ಟಂಬರ್ 1896.

ನಂ. 162.—1896—97, ಜಿಯೊಲಾಜಿಕಲ್ ಆಫಿಸ್ ಹೆಡ್‌ಕ್ವಾರ್ಟ್ರ್ ಮೆಸ್ಸರ್ಸ್ ಬಿ. ಸುಬ್ಬರಾವ್, ಬಿ. ಏ., ಯವರು, 1896ನೇ ಆಗಸ್ಟ್ ಗುರ್ತೇ ತಾರೀಖು ಲಾಗಾಯತು ಮೈಸೂರ ಜಿಯೊಲಾಜಿಕಲ್ ಇಲಾಖೆಯ ಅಸಿಸ್ಟೆಂಟ್ ಪ್ರಾಸ್ಪೆಕ್ಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,
ಆರ್. ಬ್ರೂಸ್‌ಫುಟ್ಟ್,
ಸೆಕ್ರೆಟೆರಿ.